ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: **1077**
ಸದಸ್ಯರ ಹೆಸರು	: ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	: 22.12.2021.
ಉತ್ತರಿಸುವ ಸಚಿವರು	: ಕಂದಾಯ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮದ ಅನ್ವಯ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಿ ಅಧ್ಯಕ್ಷ/ಸದಸ್ಯರುಗಳನ್ನು ನೇಮಿಸಲಾಗಿದೆಯೇ; (ಹೆಸರು ವಿಳಾಸದೊಂದಿಗೆ ಮಾಹಿತಿ ನೀಡುವುದು) ದೂರು ಸ್ವೀಕರಿಸಲು ಕಛೇರಿಯನ್ನು ಸ್ಥಾಪಿಸಲಾಗಿದೆಯೇ; ಸ್ಥಾಪಿಸಿದ್ದಲ್ಲಿ, ಯಾವ ಯಾವ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ; ಈ ಕಛೇರಿಗಳಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು; ಕೊರತೆಯನ್ನು ಯಾವಾಗ ತುಂಬಲಾಗುವುದು; (ಜಿಲ್ಲಾವಾರು, ಹುದ್ದೆ, ಹೆಸರುವಾರು, ಮಾಹಿತಿಯನ್ನು ನೀಡುವುದು)	ಹೌದು. ಅಧಿಸೂಚನೆ ಸಂಖ್ಯೆ: ಎಲ್ ಎಡಬ್ಲ್ಯೂ/162/ಎಲ್‌ಸಿಇ/2014, ದಿನಾಂಕ 10.08.2015ರ ಮೂಲಕ ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆ, 2011ರ ಕಲಂ (7)ರನ್ವಯ ಕರ್ನಾಟಕದಲ್ಲಿ ಭೂ ಕಬಳಿಕೆ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವನ್ನು ಅಧ್ಯಕ್ಷರು, ಇಬ್ಬರು ನ್ಯಾಯಿಕ ಸದಸ್ಯರು ಮತ್ತು ಇಬ್ಬರು ಕಂದಾಯ ಸದಸ್ಯರುಗಳನ್ನು ಒಳಗೊಂಡಂತೆ ಸ್ಥಾಪಿಸಲಾಗಿದೆ. ಅದರನ್ವಯ ಅಧಿಸೂಚನೆ ಸಂಖ್ಯೆ: ಆರ್ ಡಿ/351/ಎಲ್‌ಜಿಪಿ/2014 (ಭಾಗ-1) ದಿನಾಂಕ 22.03.2016ರ ಮೂಲಕ ಸದರಿ ವಿಶೇಷ ನ್ಯಾಯಾಲಯದ ಕೇಂದ್ರಸ್ಥಾನವನ್ನು ಬೆಂಗಳೂರಿನಲ್ಲಿ ಹಾಗೂ ಕ್ಷೇತ್ರವ್ಯಾಪ್ತಿಯನ್ನು ರಾಜ್ಯಾದ್ಯಂತ ವಿಸ್ತರಿಸಿ, ಮಾನ್ಯ ಉಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಗೌರವಾನ್ವಿತ ಶ್ರೀ ಹೆಚ್.ಎನ್. ನಾರಾಯಣ್, ರವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲಾಗಿರುತ್ತದೆ. ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವವರ ಪಟ್ಟಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ. ಮಾನ್ಯ ಅಧ್ಯಕ್ಷರ ಸ್ಥಾನವು 01.06.2021 ರಿಂದ ಖಾಲಿ ಇದ್ದು, ಹಂಗಾಮಿ ಅಧ್ಯಕ್ಷರನ್ನು ಸರ್ಕಾರ ನೇಮಿಸಿದೆ. ದೂರು ಸ್ವೀಕರಿಸಲು ಬೆಂಗಳೂರಿನಲ್ಲಿ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಲಾಗಿದೆ. ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಕ್ಕೆ, ವಿಲೇಖನಾಧಿಕಾರಿಗಳನ್ನು ಸೇರಿಸಿ 39 ಹುದ್ದೆಗಳು ಮಂಜೂರಾಗಿವೆ. ಈ ಪೈಕಿ 38 ಹುದ್ದೆಗಳಲ್ಲಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. 1 ಚಾಲಕ ಹುದ್ದೆ ಮಾತ್ರ ಖಾಲಿ ಇದ್ದು, ಅವಶ್ಯಕತೆಗನುಗುಣವಾಗಿ ನೇಮಿಸಲಾಗುವುದು.

ಆ)	ರಾಜ್ಯದಲ್ಲಿ ಈ ಅಧಿನಿಯಮದಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು; ಇತ್ಯರ್ಥವಾಗಿರುವ ಮತ್ತು ಬಾಕಿಯಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ವರ್ಷವಾರು, ಮಾಹಿತಿಯನ್ನು ನೀಡುವುದು) ಸದರಿ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸುವ ಮತ್ತು ವಿಚಾರಣೆಯ ಕ್ರಮಗಳ ಯಾವವು; ಸದರಿ ನ್ಯಾಯಾಲಯದಲ್ಲಿ ಆದೇಶ ಮೇಲ್ಮನವಿ ಪ್ರಾಧಿಕಾರ ಯಾವುದು;	ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆಯಡಿಯಲ್ಲಿ ದಿನಾಂಕ 22.03.2016 ರಿಂದ 2021ನೇ ನವೆಂಬರ್‌ವರೆಗೆ ದಾಖಲಾಗಿರುವ ಒಟ್ಟು ಪ್ರಕರಣಗಳ ಸಂಖ್ಯೆ 20,841. ಈ ಪೈಕಿ ಒಟ್ಟು 4,712 ಪ್ರಕರಣಗಳು ಇತ್ಯರ್ಥಗೊಂಡಿವೆ. ಉಳಿಕೆ ಪ್ರಕರಣಗಳ ಸಂಖ್ಯೆ 16,129. ಪ್ರಕರಣಗಳ ವಿಚಾರಣೆಗೆ ಸಂಬಂಧಿಸಿದಂತೆ, ಖಾಸಗಿ ವ್ಯಕ್ತಿಗಳು ಖಾಸಗಿ ಫಿರ್ಯಾದು ಸಲ್ಲಿಸಿದರೆ, ಸಂಬಂಧ ಪಟ್ಟ ತಹಶೀಲ್ದಾರ್‌ರವರು, ಅರಣ್ಯ ವಲಯಾಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಿದ ಅಧಿಕಾರಿಗಳು, ವಕ್ಫ್ ಬೋರ್ಡ್ ಅಧಿಕಾರಿಗಳು ಹಾಗೂ ಸರ್ಕಾರದ ಯಾವುದೇ ಇಲಾಖೆಗಳ ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು, ಸಂಜ್ಞೇಯತೆಯನ್ನು ತೆಗೆದುಕೊಂಡು, ಆರೋಪಿಗಳಿಗೆ ಸಮನ್ಸ್ ನೀಡಿ ಕ್ರಿಮಿನಲ್ ನ್ಯಾಯಾಲಯದ ಪ್ರಕ್ರಿಯೆಯಂತೆ ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆ 2011 ರಡಿಯಲ್ಲಿ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವು ವಿಚಾರಣೆಯನ್ನು ನಡೆಸುತ್ತದೆ. ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಆದೇಶ ಮತ್ತು ತೀರ್ಪುಗಳ ವಿರುದ್ಧ ಪ್ರಶ್ನಿಸಲು ಮಾನ್ಯ ಉಚ್ಛ ನ್ಯಾಯಾಲಯವು ಮೇಲ್ಮನವಿ ಪ್ರಾಧಿಕಾರವಾಗಿರುತ್ತದೆ.
ಇ)	ಉಡುಪಿ ಜಿಲ್ಲೆಯಲ್ಲಿ ಈ ಅಧಿನಿಯಮದಡಿ ಯಾವ ಅಧಿಕಾರಿಗಳಿಗೆ ಪ್ರಾಧಿಕಾರ ನೀಡಲಾಗಿದೆ; ಉಡುಪಿ ಜಿಲ್ಲೆಯಲ್ಲಿ ಸರ್ಕಾರಕ್ಕೆ ಸ್ಥಳೀಯ ಸಂಸ್ಥೆ ಪ್ರಾಧಿಕಾರಗಳಿಗೆ ಸೇರಿದ ಭೂಮಿಯ ಕಬಳಿಕೆಯ ಸಂಬಂಧ ವ್ಯಕ್ತಿಗಳ ಮತ್ತು ಬಾಕಿಯಿರುವ ಪ್ರಕರಣಗಳ ಸಂಖ್ಯೆ ಎಷ್ಟು? (ಪ್ರಾಧಿಕಾರವಾರು, ವರ್ಷವಾರು, ಪ್ರಕರಣವಾರು ಮಾಹಿತಿಯನ್ನು ನೀಡುವುದು)	ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಜಿಲ್ಲಾವಾರು ಪ್ರಕರಣಗಳ ದಾಖಲಾತಿಯನ್ನು ಪ್ರತ್ಯೇಕವಾಗಿ ನಿರ್ವಹಣೆ ಮಾಡಿರುವುದಿಲ್ಲ. ಹಾಗೂ ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ತಹಶೀಲ್ದಾರ್‌ರವರು, ಅರಣ್ಯ ವಲಯಾಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸರ್ಕಾರದ ಯಾವುದೇ ಇಲಾಖೆಗಳ ಅಧಿಕಾರಿಗಳು ಹಾಗೂ ಖಾಸಗಿ ವ್ಯಕ್ತಿಗಳು ಪ್ರಕರಣಗಳನ್ನು ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆ 2011 ರಡಿಯಲ್ಲಿ ದಾಖಲಿಸಬಹುದಾಗಿದೆ.

ಸಂಖ್ಯೆ: ಆರ್‌ಡಿ 253 ಎಲ್‌ಜಿಕ್ಯೂ 2021 (ಇ)

(ಆರ್.ಅಶೋಕ)

ಕಂದಾಯ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1077ಕ್ಕೆ ಅನುಬಂಧ

ಕ್ರಮ ಸಂಖ್ಯೆ	ಹೆಸರು ಮತ್ತು ಹುದ್ದೆ	ಕರ್ತವ್ಯಕ್ಕೆ ಹಾಜರಾದ ದಿನಾಂಕ	ಕರ್ತವ್ಯದಿಂದ ನಿವೃತ್ತಿಯಾದ ದಿನಾಂಕ
1.	ನ್ಯಾಯಮೂರ್ತಿ ಹೆಚ್.ಎನ್.ನಾರಾಯಣ್ ಗೌರವಾನ್ವಿತ ಅಧ್ಯಕ್ಷರು	31.03.2016	31.05.2021
2.	ಶ್ರೀ ಆರ್.ಹೆಚ್.ರೆಡ್ಡಿ ಗೌರವಾನ್ವಿತ ನ್ಯಾಯಿಕ ಸದಸ್ಯರು	31.03.2016 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ.	
3.	ಶ್ರೀ ಬಾಲಕೃಷ್ಣ.ಬಿ. ಗೌರವಾನ್ವಿತ ನ್ಯಾಯಿಕ ಸದಸ್ಯರು	30.03.2016	18.07.2019
4.	ಡಾ|| ಶಶಿಕಲಾ ಎಂ.ಎ.ಉರಣ್ಕರ್ ಗೌರವಾನ್ವಿತ ನ್ಯಾಯಿಕ ಸದಸ್ಯರು	19.07.2019 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ.	
5.	ಶ್ರೀ ಬಿ.ಆರ್.ಜಯರಾಮರಾಜೇ ಅರಸ್ ಗೌರವಾನ್ವಿತ ಕಂದಾಯ ಸದಸ್ಯರು	13.10.2016.	06.01.2020
6.	ಶ್ರೀ ಕೆ.ಆರ್.ನಿರಂಜನ್, ಗೌರವಾನ್ವಿತ ಕಂದಾಯ ಸದಸ್ಯರು	13.10.2016.	16.01.2020
7.	ಶ್ರೀ ಎಸ್. ಪಾಲಯ್ಯ, ಗೌರವಾನ್ವಿತ ಕಂದಾಯ ಸದಸ್ಯರು	08.01.2020 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ.	
8.	ಶ್ರೀ ಕೆ.ಹೆಚ್.ಅಶ್ವಥ ನಾರಾಯಣ ಗೌಡ, ಗೌರವಾನ್ವಿತ ಕಂದಾಯ ಸದಸ್ಯರು	08.01.2020 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ.	